18.	**M/s. Yezdi Distillery, Bannymantapa Layout, Mysore.**	55710	0	55710
	BRAND NAME			
	1. Royal Lancer Whisky			
	2. Efkay's Whisky			
	3. Three Stars Queen Brandy			
	4. Royal Lancer Rum			
	5. Three Feathers London Dry gin			
	6. Efkay's Bamboo Club Landon Gin			
	TOTAL	**6616809**	**4292052**	**10908861**

ಬೌರಿ ಜನಾಂಗಕ್ಕೆ ಜಾತಿ ದೃಢೀಕರಣ ನೀಡುವುದು

184 ಶ್ರೀ ರಮೇಶ ಬಂಡಿ ಸಿದ್ದೇಗೌಡ ಎ.ಬಿ. : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ಕ್ಷೇತ್ರ ವ್ಯಾಪ್ತಿಯ ಕೃಷ್ಣರಾಜ ಸಾಗರದಲ್ಲಿ ಆದಿವಾಸಿ 'ಬೌರಿ' (vagri) ಜನಾಂಗ ವಾಸ ಮಾಡುತ್ತಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗೂ ಬೌರಿ ಜನಾಂಗಕ್ಕೆ ಜಾತಿ ದೃಢೀಕರಣ ನೀಡುವ ವಿಚಾರ ಸರ್ಕಾರದ ಮುಂದೆ ಇದೆಯೇ:

ಆ) ಕನ್ನಂಬಾಡಿ ನಿರ್ಮಾಣ ಹಂತದಲ್ಲಿ ರಾಜಸ್ಥಾನದ ಕೆಲೋರ್ ಜಿಲ್ಲೆಯಿಂದ ಮತ್ತು ಗುಜರಾತ್‌ನ ಮಹಿಷನಾ ಜಿಲ್ಲೆಗಳ ಗಡಿಭಾಗದಿಂದ ವಲಸೆ ಬಂದ ಇವರು ಸುಮಾರು 30 ವರ್ಷಗಳಿಗೂ ಹೆಚ್ಚು ಕೆ.ಆರ್.ಎಸ್. ನಲ್ಲಿ ವಾಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಇವರ ಬಗ್ಗೆ ಸರ್ಕಾರ ಕೈಗೊಳ್ಳುವ ಕ್ರಮವೇನು;

ಈ) ಸುಮಾರು 200ಕ್ಕೂ ಹೆಚ್ಚು ಕುಟುಂಬಗಳು ವಾಸವಾಗಿದ್ದು ಇವರಿಗೆ ಈವರೆವಿಗೂ ಸರ್ಕಾರ ಜಾತಿ ದೃಢೀಕರಣ ಪತ್ರ ನೀಡದಿರಲು ಕಾರಣಗಳೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಉ) ಬೌರಿ ಜನಾಂಗದವರು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಥವಾ ಹಿಂದುಳಿದ ವರ್ಗಗಳ ಯಾವ ಪ್ರವರ್ಗದಲ್ಲಿ ಬರುವುದು; ಈ ಬಗ್ಗೆ ದೃಢೀಕರಣ ನೀಡಲು ಸರ್ಕಾರದ ನಿಲುವೇನು;

ಊ) 1985ರಿಂದಲೂ ಸರ್ಕಾರಕ್ಕೆ ಮನವಿ ಸಲ್ಲಿಸುತ್ತಿರುವ ಈ ಜನಾಂಗದವರು ತಮ್ಮ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಜಾತಿ ಪ್ರಮಾಣ ಪತ್ರ ಕೋರುತ್ತಿದ್ದು ಇದರ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಋ) ಗುರುತಿನ ಚೀಟಿಯನ್ನು ವಿತರಿಸಿರುವ ಸರ್ಕಾರ ಇವರ ಜಾತಿ ಪ್ರಮಾಣ ಪತ್ರ ಹಾಗೂ ಇತರೆ ಮೂಲಭೂತ ಸೌಕರ್ಯ ನೀಡದಿರಲು ಕಾರಣವೇನು; ಈ ಬಗ್ಗೆ ಕೈಗೊಂಡಿರುವ ಕ್ರಮವೇನು?

ಶ್ರೀ ಡಿ.ಸುಧಾಕರ (ಸಮಾಜ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಅನ್ವಯಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ.

ಈ) ಅನ್ವಯಿಸುವುದಿಲ್ಲ.

ಉ) ಬೌರಿ ಈ ರೀತಿಯ ಕಾಗುಣಿತವಿರುವ ಬೌರಿ ಜನಾಂಗವು ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರ್ಪಡೆಯಾಗಿರುವುದಿಲ್ಲ ಹಾಲಿ ಚಾಲ್ತಿಯಲ್ಲಿರುವ ದಿನಾಂಕ: 30-03-2002ರ ಸರ್ಕಾರದ ಆದೇಶದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಪ್ರವರ್ಗ 1ರಲ್ಲಿನ ಕ್ರಮಸಂಖ್ಯೆ 73ರಲ್ಲಿ ವಾಗ್ರಿ (vagri) ಈ ರೀತಿಯ ಕಾಗುಣಿತವಿರುವ (Spelling) ಜಾತಿಯನ್ನು ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗಿದೆ.

ಊ) ಬೌರಿ (vagri) ಜನಾಂಗಕ್ಕೆ ಸಂಬಂಧಿಸಿದಂತೆ ಯಾವುದೇ ಮನವಿ ಇರುವುದಿಲ್ಲ.

ಋ) ಅನ್ವಹಿಸುವುದಿಲ್ಲ.

199 ಡಾ॥ ಮಹದೇವಪ್ಪ ಹೆಚ್.ಸಿ. : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದ ರೈತರ ಸಾಲ ಮನ್ನಾ ಯೋಜನೆಯಡಿ ರಾಜ್ಯಕ್ಕೆ ನೀಡಲಾಗಿರುವ ಅನುದಾನವೆಷ್ಟು? ಒಟ್ಟು ರೈತ ಸಂಖ್ಯೆ ಎಷ್ಟು?

ಆ) ಈ ಪೈಕಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗದ ರೈತರುಗಳ ಸಂಖ್ಯೆ ಎಷ್ಟು? ಸಾಲ ಮನ್ನಾ ಆಗಿರುವ ಮೊತ್ತ ಎಷ್ಟು? (ಪ್ರತ್ಯೇಕವಾಗಿ ಮಾಹಿತಿ ನೀಡುವುದು)